**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 763/2021 ಪ್ರಾ.ಸಾ -- 4 ಚಾ.ಸಾ – 1**

**ದಿನಾಂಕ: 01-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಟಿ. ಪಿ. ನಂಜುಂಡಸ್ವಾಮಿ |
| ತಂದೆಯ ಹೆಸರು | : | ಸಿ. ವಿ ಪುಟ್ಟಣ್ಣ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು, ಅರಸೀಕೆರೆ ಉಪವಲಯ |
| ವಾಸಸ್ಥಳ | : | ತಿಪಟೂರು |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ**

ನಾನು 2022 ರಿಂದ ಅಕ್ಟೋಬರ್ 2025 ರ ವರೆಗೆ ತಿಪಟೂರು ಅಬಕಾರಿ ಉಪ ಅಧೀಕ್ಷಕರ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:10-11-2022 ರಂದು ನಾನು ಚಾಸಾ-4 ರವರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ತಿಪಟೂರು ನಗರ ಬಿ. ಹೆಚ್ ರಸ್ತೆಯಲ್ಲಿ ರಸ್ತೆ ಗಸ್ತು ಮಾಡುತ್ತಿದ್ದಾಗ ತಿಪಟೂರು ತಾಲ್ಲೂಕಿನ ಕೋಟನಾಯಕನಹಳ್ಳಿ ಗ್ರಾಮದಿಂದ ಒಬ್ಬ ಗ್ರಾಮಸ್ಥರು ನನಗೆ ದೂರವಾಣಿ ಮೂಲಕ ಬೆಳಗ್ಗೆ 11.30 ರ ಸಮಯದಲ್ಲಿ ಕೋಟನಾಯಕನಹಳ್ಳಿ ಗ್ರಾಮದಲಿ ಶಿವಶಂಕರ ಬಿನ್ ಶಂಕಪ್ಪ ಎಂಬುವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುತ್ತಾರೆ ಎಂಬ ಬಾತ್ಮಿ ತಿಳಿಸಿದರು. ಸದರಿ ಬಾತ್ಮಿಯ ಮೇರೆಗೆ ಕೋಟನಾಯಕನಹಳ್ಳಿ ಗ್ರಾಮಕ್ಕೆ ಮ. 12.00 ಗಂಟೆಗೆ ನಾವು ಹೋಗಿ ಆ ಊರಿನಲ್ಲಿ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಷಯ ತಿಳಿಸಿ ಅವರಿಗೆ ನೋಟೀಸನ್ನು ನೀಡಿ ಅವರು ಅದಕ್ಕೆ ಒಪ್ಪಿ ಕೊಂಡಿರುತ್ತಾರೆ. ಅವರನ್ನು ಕರೆದುಕೊಂಡು ನಾವು ಶಿವಶಂಕರ ಬಿನ್ ಶಂಕಪ್ಪ ಎಂಬುವರ ವಾಸದ ಮನೆ ಗೆ

ಹೋಗಿ ಅಲ್ಲಿ ನಾನು ಚಾಸ-4 ಪರಸ್ಪರ ಅಂಗ ಶೋಧನೆ ಮಾಡಿಕೊಂಡು, ಶೋಧನ ವಾರೆಂಟನ್ನು ಪಡೆಯವಷ್ಟು ಕಾಲಾವಕಾಶ ಇಲ್ಲದಿದ್ದ ಕಾರಣ ಸ್ಥಳದಲ್ಲಿ ಶೋಧನಾ ಸಮುಚಿತ ವರದಿಯನ್ನು ತಯಾರಿಸಿಕೊಂಡು ಸದರಿ ವ್ಯಕಯ ಮನೆಯನ್ನು ಪರಿಶೀಲಿಸಲಾಗಿ ನೋಡಲಾಗಿ ಸದರಿ ಅಸಾಮಿಯ ಮನೆಯ ಅಡುಗೆ ಕೋಣೆಯಲ್ಲಿ ಒಂದು ಬಟ್ಟೆಯ ಚೀಲ ಕಂಡು ಬಂದಿದ್ದು ಆಸಾಮಿಗೆ ಅದರಲಿ ಏನಿದೆ ಎಂದು ಕೇಳಿದಾಗ ಅದರಲ್ಲಿ ವಿವಿದ ರೀತಿಯ ಮದ್ಯದ ಟೆಟ್ರಾ ಪ್ಯಾಕೇಟುಗಳು ಇವೆ ಎಂದು ತಿಳಿಸಿರುತ್ತಾರೆ. ಆನಂತರ ಸದರಿ ಚೀಲವನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ 7 ರಾಜಾ ವಿಸ್ಕಿಯ ಪ್ಯಾಕೇಟುಗಳು , 90 ಎಂ ಎಲ್ ನ 25 ಹೈ ವಾರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳು, 90 ಎಂ ಎಲ್ ನ 30 ಓರಿಜನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು , 180 ಎಂ ಎಲ್ ನ 8 ಪಿ.ಎಂ.ನ ವಿಸ್ಕಿಯ 8 ಟೆಟ್ರಾ ಪ್ಯಾಕೇಟುಗಳು , 180 ಎಂ ಎಲ್ ನ 05 ಬಿ.ಪಿ. ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು, 180 ಎಂ ಎಲ್ ನ 06 ಅಡ್ಮಿರಲ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು , 180 ಎಂ ಎಲ್ ನ 6 ಎಂ ಸಿ ರಂ ಟೆಟ್ರಾ ಪ್ಯಾಕೇಟುಗಳು , 180 ಎಲ್ ನ 2 ಐಬಿ ವಿಸ್ಕಿಯ ಬಾಟಲುಗಳು ಕಂಡು ಬಂದಿರುತ್ತವೆ .

ನಂತರ ಆಸಾಮಿಗೆ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿರುತಾರೆ . ನಂತರ ಪಂಚರ ಸಮಕ್ಷಮ ದೊರತೆ ಟೆಟ್ರಾಪ್ಯಾಕೇಟುಗಳು ಮತ್ತು ಬಾಟಲಿಗಳನ್ನು ರಾಸಾಯಿನಿಕ ಪರೀಕ್ಷೆಗಾಗಿ 90 ಎಂ ಎಲ್ ನ 7 ರಾಜಾ ವಿಸ್ಕಿಯ ಪ್ಯಾಕೇಟುಗಳು , 90 ಎಂ ಎಲ್ ನ 10 ಹೈ ವಾರ್ಡ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳು, 90 ಎಂ ಎಲ್ ನ 10 ಓರಿಜನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು , 180 ಎಂ ಎಲ್ ನ 8 ಪಿ.ಎಂ.ನ ವಿಸ್ಕಿಯ 8 ಟೆಟ್ರಾ ಪ್ಯಾಕೇಟುಗಳು , 180 ಎಂ ಎಲ್ ನ 03 ಬಿ.ಪಿ. ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು, 180 ಎಂ ಎಲ್ ನ 03 ಅಡ್ಮಿರಲ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು , 180 ಎಂ ಎಲ್ ನ 3 ಎಂ ಸಿ ರಂ ಟೆಟ್ರಾ ಪ್ಯಾಕೇಟುಗಳು , 180 ಎಲ್ ನ 2 ಐಬಿ ವಿಸ್ಕಿಯ ಬಾಟಲುಗಳು ಹಾಗೂ ಗೊಬ್ಬರದ ಬಿಳಿ ಚೀಲದಲ್ಲ ವಶಕ್ಕೆ ಪಡೆದು ಅವುಗಳನ್ನು ಚೀಲದಲ್ಲಿ

ಹಾಕಿ ಬಿಳಿ ದಾರದಿಂದ ಕಟ್ಟಿ ಅರಗನ್ನು ಹಾಕಿ ಇಲಾಖಾ ಸೀಲು ನಂ. 27 ನೇ ನಂಬರಿನ ಸೀಲನ್ನು ಹಾಕಿ ಜಪ್ತಿ ಪಡಿಸಿಕೊಂಡಿರುತೇವೆ. ಸದರಿ ಮಾದರಿ ಸೀಲಿನ ನಕಲನ್ನು ಪಡೆದು ಪಂಚರ ಸಹಿಯನ್ನು ಪಡೆದಿರುತ್ತೇವೆ, ಜಪ್ತಿ ಪಡಿಸಿಕೊಂಡ ಮು. ಮಾ.ಗಳ ಮೇಲೆ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ಸ್ಥಳದಲ್ಲಿ ಮ. 12.00 ರಿಂದ 1.30 ರವರೆಗೆ ಪಂಚನಾಮೆಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಗೆ ನಾನು, ಚಾಸಾ-2 ರಿಂದ 4 ರವರು ಸಹಿ ಮಾಡಿರುತ್ತೇವೆ. ನಂತರ ಸಿಆರ್ ಪಿ ಸಿ ಕಲಂ 41 ರ ಅಡಿಯಲ್ಲಿ ನೋಟೀಸು ಜಾರಿ ಮಾಡಿ ಆತನನ್ನು ವಶಕ್ಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಚಾಸ್ಸಾ-4 ರವರು ಲ್ಯಾಪ್ ಟ್ಯಾಪನಲ್ಲಿ ಪಂಚನಾಮೆಯನ್ನು ತಯಾರು ಮಾಡಿರುತಾರೆ.

ನಂತರ ಕವೇರಿಗೆ ಸಿಕ್ಕ ಮುದ್ದೆಮಾಲುಗಳನ್ನು ಹಾಗೂ ಪಂಚನಾಮೆಯನ್ನು ತೆಗೆದುಕೊಂಡು ಹೋಗಿ ನಾನೇ ಪ್ರಕರಣವನ್ನು ದಾಖಲಿಸಿ ಪ್ರವವ ವನ್ನು ತಯಾರಿಸಿ ನಾ ಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ 21-11-2022 ರಂದು ಚಾಸಾ-4 ರವರ ಮುಖಾಂತರ ಮು. ಮಾ.ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ದಿನಾಂಕ 07-12-2022 ರಂದು ಮುಂದಿನ ತನಿಖೆಗಾಗಿ ಚಾಸಾ6 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು.

ನಿಪಿ.2 ಮತ್ತು 3 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ 2(ಸಿ) ಮತ್ತು ನಿಪಿ.3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ ಪ್ರವವ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.7 ಎಂದು , ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ ಕಲಂ 54 ರ ಡಿಯಲ್ಲಿನ ಶೋಧನಾ ಸಮುಚಿತ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು , ಸಾಕ್ಷಿಯ ಸಹಿಯನ್ನು ನಿಪಿ 5(ಎ)

ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.6 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ಅರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ

ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮು,ಮಾ1 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು,ಮಾ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರು ವ ವಸುತಗಳ ಪಟ್ಟಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಎಂದು , ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಶ್ರೀ ಎಂ ಸಿ ಎನ್ ವಕೀಲರಿಂದ</u> :-**

ಬಾತ್ಮಿ ಬರುವ ಕಾಲಕ್ಕೆನಾನು ಯಾವ ಸ್ಥಳದಲ್ಲದ್ದೆ ಎಂದು ಹೇಳಲಕು ಆಗುವುದಿಲ್ಲ. ಬಿ.ಹಹೆಚ್. ರಸ್ತೆಯಿಂದ ಕೋಟನಾಯಕನಹಳ್ಳಿಗೆ ನಾನು ತುವಕುಮಾರು ರಸ್ತೆಯ ಮಾರ್ಗವಾಗಿ ಹೋಗಿರುತ್ತೇನೆ,

ಕೋಟನಾಯಕನಹಳಿ ಸುಮಾರು 1ವರೆ ಸಾವಿರ ಮನೆಗಳು ಇರುವ ಗ್ರಾಮ ಎಂದರೆ ಅದು ದೊಡ್ಡ ಗ್ರಾಮ ಎಂದು ನುಡಿಯುತ್ತಾರೆ. ಸದರಿ ಗ್ರಾಮಕ್ಕೆನಾನು ಮತು ಚಾಸಾ-4 ರವರು ಹೋುಗಿರುತೇವೆ. ಅರೋಪಿತರ ಮನೆಯನ್ನು ಗ್ರಾಮಸ್ಥರು ತೋರಿಸಿರುತ್ತಾರೆ. ಅತನ ಮನೆಗೆ ನಾವು ನೇರವಾಗಿ ಹೋಗಿರುತ್ತೇವೆ. ನಾವು ಮೊದಲು ಗ್ರಾಮಕ್ಕೆ ಹೋು ಚಾಸಾ-2 ಮತುತ 3 ರವರನ್ನು ಪಂಚರಾಗಿ ಬರಮಾಡಿಕೊಂಡು ಆನಂತರ ಗ್ರಾಮಸ್ಥರು ತೋರಿಸಿದ ಮನೆಗೆ ಹೋಗಿರುತ್ತೇವೆ. ನಿಪಿ.1 ಪಂಚನಾಮೆಯಲ್ಲಿ ಮನೆ ಸಂಖೆ ನಮೂದು ಅಗಿರುತ್ತದೆ . ಕೋಟನಾಯಕನಹಳ್ಳಿಯಲಿಲ ಹಲವಾರು ಶಿವಶಂಕರ ಇದ್ದಾರೆ ಎಂದರೆ ನಗೆ ಗೊತ್ತಿಲ್ಲ. ನಿಪಿ.1 ಪಂಚನಾಮೆಯಲ್ಲಿ ಮನೆಯಲ್ಲಿ ಎಷ್ಟು ಕೋಣೆ ಗಳು ಇದ್ದವು ಎಂದು ನಮೂದು ಮಾಡಿಲ್ಲ. ನಿಪಿ.1 ಪಂಚನಾಮೆಯಲ್ಲಿ ಬಟ್ಟೆ ಬ್ಯಾಗು ಇತ್ತು ಎಂದು ನಮುದು ಮಾಡಿದ್ದು ಅದನುನ ಜಪ್ತಿಪಡಿಸಿಕೊಂಡಿರುವುದಿಲ್ಲ , ನಿಪಿ.9 ರಲ್ಲಿ ತೋರಿಸಿರುವುದಿಲ್ಲ ಮತ್ತು ನಾ

ಯಾಲಯಕ್ಕೆಹಾಜರುಪಡಿಸಿರುವುದಿಲ್ಲ.

ನಿಪಿ.1 ರಲ್ಲಿ ಜಪ್ತಿಪಡಿಸಿಕೊಂಡಿರುತತೇನೆ ಎಂದು ಹೇಳುವ ಮು. ವಾ. ಬ್ಯಾಚ್ ನಂಬರ್ , ಮ್ಯಾನು ಫಕ್ಚರಿಂಗ್ ಡೇಟ್ ಮತ್ತು ಟಿನ್ ನಂಬರನ್ನು ನಮೂದು ಮಾಡಿಲ್ಲ. ನಿಪಿ.1 ನ್ನು ಕಛೇರಿಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸ ರಿಯಲ್ಲ. ನಿಪಿ.1 ನ್ನು ಚಾಸಾ-4 ರವರು ಬೆರಳಚ್ಚು ಮಾಡಿರುತ್ತಾರೆ. ನಿಪಿ.1 ರಲ್ಲಿ ಸ್ಥಳೀಯ ರು ಸಾಕ್ಷಿಯಾಗಿ ಸಹಿ ಮಾಡಿರುತಾರೆ ಮತ್ತು ಇನ್ನುಳಿದ ಸ್ಥಳೀಯರು ನಿರಾಕರಿಸಿರುತಾರೆ ಎಂದು ನಮೂದು ಮಾಡಿರುತ್ತಾರೆ ಎದರೆ ಸರಿ . ಆರೋಪಿತನು ಯಾವುದೇ ಮು.ಮಾ. ಗಳನ್ನು ಇಟುಟಕೊಂಡಿರಲಿಲ್ಲ ಹಾಗು ಅವುಗಳನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸ ರಿಯಲ್ಲ. ಮ.ಮಾ.1 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತತೇನೆ ಎಂದರೆಸ ರಿಯಲ್ಲ. ನಾನು ಸಿಕ್ಕಂತಹ ಎಲ್ಲಾ ಮದ್ಯದ ಪ್ಯಾಕೇಟಗಳನ್ನು ಎಫ್ ಎಸಿ ಎಲ್ ಗೆ ಕಳುಹಿಸಿರುವುದಿಲ್ಲ. ನಿಪಿ.1 ಪಂಚನಾಮೆಯಲ್ಲಿ ಮು.ಮಾ.ಗಳನ್ನು ಪ್ಲಾಸ್ಟಿಕ್ ಚೀಲಕ್ಕೆ ಹಾಕಿ ಸೀಲುಮಾಡಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ.

ನಾನು ಘಟನೆ ಆಯಿತು ಎಂದು ಹೆಳುವ ಸ್ಥಳಕ್ಕೆ ಹೋಗಿರುವುದಿಲ್ಲ, ನಾನು ಯಾವುದೇ ಮನೆಯನ್ನು ಶೋಧನೆ ಮಾಡಿ ಯಾವುದೇ ಮು.ಮಾ, ಗಳನ್ನು ಜಪ್ತಿಪಡಿಸಿಕೊಂಡಿರುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಗೆ ನಾನು ಹೋಗಿರುವುದಿಲ್ಲ ಎಂದರೆ ಸ ರಿಯಿಲ್ಲ. ಆರೋಪಿತನು ವ್ಯವಸಾಯ ಮಾಡುತ್ತಿದ್ದು ಯಾವುದೇ ಮದ್ಯ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸ ರಿಯಲ್ಲ.

ನಾನು ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**